
# ಹಿಪ್ಪೋನ ಬಿಕ್ಕಳಿಕೆ



ಗೀತಾ ಧರ್ಮರಾಜನ್
ಕಲೆ: ಅತನು ರಾಯ್





ಕಥಾದಿಂದ ಒಂದು 300ಎಂ ಥಿಂಕ್‌ಬುಕ್

ಒಂದು ದಿನ, ನಡು ಮಧ್ಯಾಹ್ನ, ಗುಲ್ ಮೊಹರ್ ಕಾಡಿನ ಬಿಳಿ ನೈದಿಲೆ ಕೊಳದಲ್ಲಿ ದೊಡ್ಡದು ಅದೇನೋ ಧೊಪ್ಪನೆ ಬಂದು ಬಿದ್ದಿತು.


ಧೊಪ್!...

ಧಭಾರ್! ...






ಮಲ್ಲಿ ಎಂಬ ಮೊಲ,
ಹನು ಎಂಬ ಮಂಗ,
ಗಿರಿ ಎಂಬ ಗಿಳಿ ಅರಚಿದವು...




ಅವರಿಗೆಲ್ಲಾ ಅದೆಷ್ಟು ಭಯ ಆಗಿತ್ತೆಂದರೆ, ಕೊಳದಿಂದ 'ಅದು' ನಿಧಾನವಾಗಿ ಎದ್ದು ಹೊರ ಬಂದಿದ್ದನ್ನು ಯಾರೂ ನೋಡಲೇ ಇಲ್ಲ. ಮಲ್ಲಿ ಮೊಲವೇ ಮೊದಲಿಗೆ ಅದನ್ನು ನೋಡಿದ್ದು.




ಈಗಂತೂ, ನೀಕುಗೆ ಅಳುವೇ ಬಂತು.
"ನಾನು... ಮನೆ..ಗೆ ಹೋಗಬೇ-ಹಿಕ್!-ಕೂ!"
ಎಂದು ಜಿಗಿಯುತ್ತಾ ಗೋಳಾಡಿತು.





ಈ ಗದ್ದಲದಿಂದ ಎಚ್ಚರಗೊಂಡ
ರಾತ್ರಿ ಎಂಬ ಗೂಬೆ, ಕೇಳಿತು.




ಆದರೆ, ನೀನು
ಇಲ್ಲಿಗೆ ಹೇಗೆ ಬಂದೆ?
ಇಳಾ ಎಂಬ
ಕಂಬಳಿಹುಳ ಕೇಳಿತು.


ಭಾರತ
ಆಫ್ರಿಕಾ


ನಾನು ಅಮ್ಮನ ಜೊತೆ ಇದ್ದೆ. ಇದ್ದಕ್ಕಿದ್ದ ಹಾಗೆ ಈ ಬಿಕ್ಕಳಿಕೆ ಬಂತು– ಆಮೇಲೆ – ಹಿ...ಈಈಈಕ್!? ನಾನು ಗಾಳಿಯಲ್ಲಿ ಹಾರಿಬಿಟ್ಟೆ!
ಅಮ್ಮನಿಗೆ ನನ್ನನ್ನು ತಡೆಯಲು ಆಗಲಿಲ್ಲ. ನನ್ನ ಚಿಕ್ಕಮ್ಮಂದಿರಿಗೂ ಆಗಲಿಲ್ಲ. ಶಕ್ತಿಶಾಲಿಯಾದ ನನ್ನ ಅಪ್ಪನಿಗೂ ಆಗಲಿಲ್ಲ!
ಇಲ್ಲಿಗೆ ಬಂದು ಬಿದ್ದೆ! ನನಗಂತೂ ಆ ದೊಡ್ಡ ಬಿಕ್ಕಳಿಕೆ ಮತ್ತೆ ಬಂದು ಬಿಟ್ಟರೆ ಅಂತ ಭಯ ಆಗುತ್ತಿದೆ! ಈ ಸಲ ಬಿಕ್ಕಳಿಕೆ ಬಂದರಂತೂ ನಾನು ತಿರುಗಿ ಕೆಳಗೆ ಬಾರದಷ್ಟು ಮೇಲೆ ಹಾರಿಹೋಗುತ್ತೇನೋ ಏನೋ!
ತನ್ನ ಸುತ್ತ ಇರುವ ಪ್ರಾಣಿಗಳನ್ನು ನೋಡುತ್ತಾ ನೀಕು ಹೇಳಿತು.



"ನಿನ್ನ ಬಿಕ್ಕಳಿಕೆ ಹೋಗಿಸಲು ನಾವೆಲ್ಲ ಸಹಾಯ
ಮಾಡುತ್ತೇವೆ!" ಮಲ್ಲಿ ಹೇಳಿತು.

"ಮತ್ತೆ ನನ್ನನ್ನು ಮನೆ ತಲುಪಿಸುತ್ತೀರಾ?" ನೀಕು
ಆಸೆಯಿಂದ ಕೇಳಿತು.


"ಖಂಡಿತಾ. ನಾವು ಪ್ರಯತ್ನಿಸುತ್ತೇವೆ, " ಹನು
ಹೇಳಿತು. "ನಮ್ಮ ಉಳಿದ ಗೆಳೆಯರನ್ನೆಲ್ಲಾ ಕರೆದು
ಮಾತಾಡೋಣ! ಯಾರಾದರೂ ಈ ಬಿಕ್ಕಳಿಕೆಗೆ
ಪರಿಹಾರ ಕೊಡಬಹುದು!"

ಮಲ್ಲಿ ಮೊಲ ಆನೆಗಳು, ಹುಲಿಗಳು, ಬಾವಲಿಗಳು
ಮತ್ತು ಜೇಡಗಳನ್ನು ಕರೆಯಲು ಹೋಯಿತು.
ಜೊತೆಗೆ ಉಳಿದ ಎಲ್ಲರನ್ನೂ.

ಎಲ್ಲರೂ ಯೋಚಿಸುತ್ತಾ ಕುಳಿತರು.
ಇದ್ದಕ್ಕಿದ್ದಂತೆ "ನೀರು!" ಎಂದಿತು ಕಾಡು ನರಿ.
"ಬಿಕ್ಕಳಿಕೆ ಬಂದಾಗ ನಾವು ಅದನ್ನೇ ಕುಡಿಯುತ್ತೇವೆ.
ಪ್ರತಿ ಸಲವೂ ಅದು ಸಹಾಯ ಮಾಡುತ್ತದೆ!"

"ಧನ್ಯವಾದ!" ಎಂದಿತು ನೀಕು,
"ನೀರೆಂದರೆ ನನಗೆ ಇಷ್ಟ!"

ಅದು ನಿಧಾನವಾಗಿ ಬಿಳಿ
ನೈದಿಲೆ ಕೊಳದ ಕಡೆ ನಡೆದು...
ಹಾಗೆಯೇ ಕಣ್ಮರೆಯಾಗಿಬಿಟ್ಟಿತು.



ಹಲವು ಕ್ಷಣಗಳಾದರೂ ನೀಕು ಕಾಣದೇ ಇದ್ದುದರಿಂದ "ಅರೆ! ಅವನೇನಾದರೂ ಮುಳುಗಿಬಿಟ್ಟನಾ?" ಎಂದು ಕೇಳಿತು ಅನು ಎಂಬ ಆನೆ.

"ಅವನಿಗೆ ಈಜು ಬರುವ ಹಾಗೇನೂ ಕಾಣಲಿಲ್ಲ," ಕಾಕಾ ಎಂಬ ಕಾಗೆ ಚಿಂತಿಸುತ್ತಾ ಹೇಳಿತು. ಆಗಲೇ, ನೀಕು ನಗುತ್ತಾ ವಾಪಸು ಬಂತು.




"ಆಹಾ, ಮನೆಯಲ್ಲಿ ಇದ್ದ ಹಾಗೇ ಇತ್ತು!" ಎಂದಿತು ನೀಕು, ಖುಷಿಯಿಂದ ಗುಳುಗುಳು ಮಾಡುತ್ತಾ. "ನನಗೆ ಎಲ್ಲಾ ಮರೆತು ಹೋದಂತೆ ಆಗಿ ಹಾಗೇ ಓಡಾಡಿಕೊಂಡು ಬಂದೆ! ಕ್ಷಮಿಸಿ!"


"ಏನು ಓಡಾಡಿದೆಯಾ? ಅದೂ ನೀರೊಳಗೆ?" ಆಶ್ಚರ್ಯದಿಂದ ಕೇಳಿತು ಅನು ಆನೆ.

"ಕೆರೆಯೊಳಗೆ ನಡೆದಾಡುವುದು ನನಗೆ ಬಲು ಇಷ್ಟ," ನೀಕು ಹೇಳಿತು. "ನಾನು ಚೆನ್ನಾಗಿ ಈಜಲೂ ಬಲ್ಲೆ! ನೆಲದ ಮೇಲೆ ಓಟದ ಸ್ಪರ್ಧೆ ಇಟ್ಟರೂ ನಿಮ್ಮನ್ನೆಲ್ಲ ಸೋಲಿಸುವೆ..."

ಆಗ ಇದ್ದಕ್ಕಿದ್ದಂತೆ...





ಎಲ್ಲ ಪ್ರಾಣಿಗಳೂ ನೀಕುವಿನ ಬಿಕ್ಕಳಿಕೆ ತಡೆಯಲು ಏನೆಲ್ಲಾ ಮಾಡಿದವು ...



... ಅದಕ್ಕೆ ಸಕ್ಕರೆ ಕೊಟ್ಟರು...

... ಉಸಿರು ಬಿಗಿ ಹಿಡಿಯಲು ಹೇಳಿದರು...





... ಮತ್ತು ಹೆದರಿಸಿಯೂಬಿಟ್ಟರು!

ಆದರೆ, ನೀಕು ಇರುವ ಗಾತ್ರಕ್ಕೆ ಅದು ಹೆದರುವ ಪ್ರಾಣಿಯೇ!



**ಆಗ...**


ಕೇಳಿ! ಅವನ ಬಿಕ್ಕಳಿಕೆ
ತಡೆದರೆ, ಅವನು ಮನೆ
ತಲುಪುವುದು ಹೇಗೆ?


ಹರಿ ಹುಲಿಯ ಈ ಮಾತು ಕೇಳಿ ಹನು "ಅಯ್ಯಯ್ಯೋ! ನಾವು ಅದರ ಬಗ್ಗೆ ಯೋಚಿಸಿಯೇ ಇರಲಿಲ್ಲ!" ಎಂದಿತು.

"ನಾವೀಗ ಅವನಿಗೆ ದೊಡ್ಡ ಬಿಕ್ಕಳಿಕೆ ಬರಿಸಲು ಪ್ರಯತ್ನಿಸೋಣ. ಅದು ಎಷ್ಟು ದೊಡ್ಡದಿರಬೇಕೆಂದರೆ ಅವನು ಬಂದ ಹಾಗೇ ವಾಪಸು ಹಾರಿ ಮನೆ ಸೇರಿಬಿಡಬೇಕು!" ಎಂದಿತು ಗಿರಿ ಎನ್ನುವ ಗಿಳಿ.




"ನಾವು ಅವನಿಗೆ ಕಚಗುಳಿ ಇಡೋಣ!" ಎಂದವು ಇರುವೆಗಳು. "ನಾವು ಅವನಿಗೆ ಎಂತಹ ಜೋಕ್ ಹೇಳಬೇಕೆಂದರೆ ಅವನು ಸೀದಾ ಮನೆ ಸೇರಿ ಬಿಡಬೇಕು!" ಎಂದವು ಕಪಿಗಳು. "ಆಹಾ!" ಎಂದಿತು ನೀಕು, ದೊಡ್ಡದಾಗಿ ಕಣ್ಣು ಬಿಡುತ್ತಾ."ಇಗೋ ಅಮ್ಮ, ಇನ್ನೇನು ನಾನು ಬಂದೆ!" ಎಂದಿತು.





ಇರುವೆಗಳು ನೀಕುವಿಗೆ ಕಚಗುಳಿಯಿಟ್ಟವು.
ಎಲ್ಲರೂ ತಮಗೆ ಗೊತ್ತಿರುವ ಜೋಕುಗಳನ್ನೂ ತಮಾಷೆಯ
ಒಗಟುಗಳನ್ನೂ ಜೋರು ಜೋರಾಗಿ ಹೇಳಿದರು.

ಕೊಕ್ಕರೆಗಳು ಒಂದೇ
ಕಾಲಲ್ಲಿ ನಿಲ್ಲೋದೇಕೆ?

ಯಾಕೆಂದರೆ ಇನ್ನೊಂದು
ಕಾಲನ್ನೂ ಎತ್ತಿದರೆ,
ನೆಲಕ್ಕೆ ಬೀಳಬೇಕಾಗುತ್ತೆ!

ಏಳು ಅಡಿ ಎತ್ತರದ
ಗೊರಿಲ್ಲಾ ಮಲಗೋದೆಲ್ಲಿ?

ಅವನಿಗೆಲ್ಲಿ
ಬೇಕೋ ಅಲ್ಲಿ!

ಹಿಪ್ಪೋವಿನಷ್ಟೇ ದೊಡ್ಡದಾಗಿದ್ದರೂ,
ಸ್ವಲ್ಪವೂ ಭಾರವಿಲ್ಲದ್ದು ಯಾವುದು?


ಅದರ ನೆರಳು!

ಕಪ್ಪೆಗಳು ತಮ್ಮ
ಹಣವನ್ನು ಎಲ್ಲಿಡುತ್ತವೆ?

ರಿವರ್
ಬ್ಯಾಂಕ್‌ನಲ್ಲಿ!

ಕಪಿಗಳು, ಆನೆಗಳು, ಕಂಬಳಿ ಹುಳಗಳು ಮತ್ತು
ಪಕ್ಷಿಗಳೆಲ್ಲಾ ಬಿದ್ದು ಬಿದ್ದು ನಗುತ್ತಿದ್ದವು!

ಅವರ ಮಧ್ಯೆ ನಿಂತಿದ್ದ ನೀಕುವಿಗೂ
ಎಲ್ಲಿಲ್ಲದ ನಗು. ಅಷ್ಟು
ಜೋಕುಗಳನ್ನು ಅದು ಹಿಂದೆಂದೂ
ಕೇಳಿಯೇ ಇರಲಿಲ್ಲ!




ಆನೆಯೊಂದರ ತಮಾಷೆ ಜೋಕು ಕೇಳುವಾಗಲೇ, ನೀಕು ಬಿಕ್ಕಳಿಸಿತು! ಎಷ್ಟು ದೊಡ್ಡ ಬಿಕ್ಕಳಿಕೆ ಎಂದರೆ, ಹಿಪ್ಪೋನಷ್ಟು ದೊಡ್ಡದು




# ಹಿಕ್!

ಅದು ಮೇಲಕ್ಕೆ ಹಾರಿತು, ಆಲದಮರದ ಮೇಲಕ್ಕೂ ಏರಿ, ಹೇಗೆ ಬಂದಿದ್ದನೋ ಹಾಗೆಯೇ ಹಾರಿತು. "ಬರ್ತೀನಿ ಕಣ್ರೋ! ತುಂಬಾ ಥ್ಯಾಂಕ್ಸ್!"? ಎಂದು ಖುಷಿಯಾಗಿ ಹಾರುತ್ತಿದ್ದ ನೀಕು ಕೂಗಿ ಹೇಳಿತು.



"ಹುಷಾರು ಕಣಪ್ಪ!" ಎಂದವು ಎಲ್ಲಾ ಪ್ರಾಣಿಗಳು.

ಅಬ್ಬಾ, ಅಂತೂ ಮನೆ ಸೇರಿದೆ!




ಹಾ, ನಾನು ಮರೆತು ಬಿಡುವ ಮುಂಚೆ. ಗುಲ್ ಮೊಹರ್ ಕಾಡಿನ ಪ್ರಾಣಿಗಳು ನೆನ್ನೆಯಷ್ಟೇ ಆಫ್ರಿಕಾದ, ಮಿಜೀ?ಮಾ ಸ್ಪ್ರಿಂಗ್ಸ್‌ನಿಂದ ಬಂದ ದೊಡ್ಡ ಧ್ವನಿಯ 'ಥ್ಯಾಂಕ್ಸ್' ಅನ್ನು ಕೇಳಿಸಿಕೊಂಡವಂತೆ.

ಹೌದು, ನಿಮ್ಮ ಊಹೆ ಸರಿ! ಆ ದೊಡ್ಡ ಧ್ವನಿ ಬಿಕ್ಕಳಿಸುವ ಹಿಪ್ಪೋ ನೀಕುನದ್ದೇ!

# ಯಾರಿದು ಊಹಿಸಿ?

ಅದರ ಹೆಸರಿನ ಅರ್ಥ 'ನೀರು ಕುದುರೆ'. ಅದು ಹಂದಿಯಂತೆ ಕಾಣುತ್ತದೆ. ಅದು ತುಂಬಾ ದೊಡ್ಡದಾಗಿ, ಗುಂಡು ಗುಂಡಾಗಿ ಮತ್ತು ಭಾರೀ ಗಾತ್ರದ್ದಾಗಿರುತ್ತದೆ (ನಿಮ್ಮ ಜೊತೆ, ನಿಮ್ಮಷ್ಟೇ ತೂಕದ ಇನ್ನೂ 200 ಮಂದಿಯ ತೂಕಕ್ಕೆ ಅದು ಸಮ ಎನ್ನಬಹುದು!), ಆದರೂ ಅದು ನಿಮಗಿಂತ ಹೆಚ್ಚು ವೇಗವಾಗಿ ಓಡಬಲ್ಲದು ಮತ್ತು ಸೊಗಸಾಗಿ ಈಜಬಲ್ಲದು. ಅದರ ಹೆಸರನ್ನು ಈಗ ಊಹಿಸಿದಿರಾ? ಅದೇ

## ಹಿಪ್ಪೋಪೊಟಾಮಸ್, ಸಂಶಯವೇ ಬೇಡ!





ಅದರ ಹಿಂಭಾಗ ಮತ್ತು ಪಕ್ಕೆಗಳ ಚರ್ಮ ನಿಮ್ಮ ನಾಲ್ಕು ಬೆರಳುಗಳ ಅಗಲದಷ್ಟು ದಪ್ಪವಾಗಿರುತ್ತದೆ. ಆದ್ದರಿಂದಲೇ ಬಹುಶಃ ವಯಸ್ಕ ಸಿಂಹವೊಂದನ್ನು ಹೊರತುಪಡಿಸಿ ಅದು ಯಾವುದೇ ಪ್ರಾಣಿಗೂ ಹೆದರುವುದಿಲ್ಲ.

ಹಿಪ್ಪೋನ ಬಾಯಿ ಅದೆಷ್ಟು ದೊಡ್ಡದಾಗಿದೆ ಎಂದರೆ ನೀವು ಸುಲಭವಾಗಿ ಅದರೊಳಗೆ ಕಾಲಿಟ್ಟು ನಡೆದಾಡಬಹುದು – ನೀವು ಯಾವತ್ತಾದರೂ ಹಾಗೆ ಮಾಡಲು ಬಯಸುತ್ತೀರಿ ಅಂತಲ್ಲ! ಹಿಪ್ಪೋಗಳನ್ನು ಸಾಮಾನ್ಯವಾಗಿ ತಮ್ಮ ಪಾಡಿಗಿರಲು ಬಿಟ್ಟರೆ ಅವು ಶಾಂತ ಹಾಗೂ ಸ್ನೇಹ ಸ್ವಭಾವದ ಪ್ರಾಣಿಗಳೇ. ಆದರೆ, ಕೋಪಗೊಂಡ ಹಿಪ್ಪೋ ಒಂದು ಬೋಟನ್ನು ಬೇಕಾದರೂ ತನ್ನ ವಸಡಿನಿಂದಲೇ ಪುಡಿ ಪುಡಿ ಮಾಡಿ ಬಿಡಬಹುದು!

ಹಿಪ್ಪೋಗಳಿಗೆ ಆಫ್ರಿಕಾದ ತಮ್ಮ ನದಿಗಳಲ್ಲಿ ದಿನವಿಡೀ ಆರಾಮಾಗಿರುವುದು ತುಂಬಾ ಇಷ್ಟ. ಕೆಲವು ಸಲ ಕಳೆಗಿಡಗಳು ಮತ್ತು ನೀರಿನ ಸಸ್ಯಗಳನ್ನು ಬಾಯಿತುಂಬಾ ತುಂಬಿಕೊಂಡು ಅವು ನೀರಿನಾಳದಲ್ಲಿ ಓಡಾಡುತ್ತಿರುತ್ತವೆ. ಶ್ವಾಸಕೋಶಕ್ಕೆ ನೀರು ಹೋಗದಂತೆ ಅವುಗಳ ಮೂಗಿನ ಹೊಳ್ಳೆಗಳನ್ನು ಮುಚ್ಚಲು ಚರ್ಮದ ವಿಶೇಷ ಕವಾಟಗಳಿರುತ್ತವೆ.

ಹಿಪ್ಪೋ ಮರಿಗಳು ನೀರಿನಲ್ಲೇ ಹುಟ್ಟುತ್ತವೆ ಮತ್ತು ನಡೆಯುವುದನ್ನು ಕಲಿಯುವ ಮೊದಲೇ ಈಜುತ್ತವೆ! ಒಂದು ಸಲಕ್ಕೆ ಒಂದೇ ಮರಿ ಹುಟ್ಟುತ್ತದೆ. ಮರಿಯು ನಡಿಗೆ ಕಲಿಯುತ್ತಿದ್ದಂತೆ, ಅದು ಹೆಣ್ಣಾಗಲಿ – ಗಂಡಾಗಲಿ ತನ್ನ ಪಾಡಿಗೆ ತಾನು ಓಡಾಡಿಕೊಳ್ಳಲು ಬಯಸುತ್ತದೆ. ಆದರೆ, ಅಮ್ಮ ನೀರಾನೆಯು ಮರಿಗಳ ಹಿಂದೆಯೇ ಇರುತ್ತದೆ. ಅಪಾಯದಿಂದ ದೂರವಿರುವುದನ್ನು, ಆಹಾರ ಹುಡುಕುವುದನ್ನು, ಆಟ ಆಡುವುದನ್ನು ಮರಿ ನೀರಾನೆಗಳು ಅಮ್ಮನನ್ನು ನೋಡಿಯೇ ಕಲಿಯುತ್ತವೆ!





**ಗೀತಾ ಧರ್ಮರಾಜನ್** ಮಕ್ಕಳಿಗಾಗಿ ಕಥೆ ಬರೆಯುವುದನ್ನು ಇಷ್ಟಪಡುತ್ತಾರೆ. ಅವರು ಮಕ್ಕಳ ಪತ್ರಿಕೆ ಟಾರ್ಗೆಟ್ ಹಾಗೂ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಪತ್ರಿಕೆ ಪೆನ್ಸಿಲ್ವೇನಿಯಾ ಗೆಜೆಟ್‌ನ ಸಂಪಾದಕರಲ್ಲಿ ಒಬ್ಬರಾಗಿದ್ದರು. ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮಾಡಿದ ವಿಶೇಷ ಸೇವೆಗಾಗಿ 2012ರಲ್ಲಿ ಅವರಿಗೆ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ನೀಡಲಾಯಿತು.

ನೂರಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳಿಗೆ ಚಿತ್ರರಚನೆ ಮಾಡಿರುವ ಅತನು ರಾಯ್, ತಮ್ಮ ಕ್ರಿಯಾತ್ಮಕ ಸಾಮರ್ಥ್ಯದ ಬಹುಪಾಲನ್ನು ಮಕ್ಕಳ ಸಾಹಿತ್ಯಕ್ಕಾಗಿ ಮುಡಿಪಾಗಿಟ್ಟಿದ್ದಾರೆ. ರಾಯ್ ಅವರು ಬಳಸುವ ಗಾಢ ಬಣ್ಣಗಳು ಮತ್ತು ಕಣ್ಣಿಗೆ ಕಟ್ಟುವಂತಹ ವಿವರಗಳು, ಅವರ ಓದುಗರ ಕಣ್ಣು ಹಾಗೂ ಮನಸ್ಸನ್ನು ಸೂರೆಗೊಳ್ಳುತ್ತವೆ. ಹಿಂದೆ ಇಂಡಿಯಾ ಟುಡೆಯಲ್ಲಿ ರಾಜಕೀಯ ವ್ಯಂಗ್ಯಚಿತ್ರಕಾರರಾಗಿ ಕೆಲಸಮಾಡಿದ್ದ ರಾಯ್ ಅವರಿಗೆ ಚಿಲ್ಡ್ರನ್ಸ್ ಚಾಯ್ಸ್ ಅವಾರ್ಡ್ ಫಾರ್ ಬುಕ್ ಇಲ್ಲಸ್ಟ್ರೇಶನ್ಸ್ ಹಾಗೂ ಐಬಿಬಿವೈ ಸರ್ಟಿಫಿಕೇಟ್ ಆಫ್ ಆನರ್ ಫಾರ್ ಇಲ್ಲಸ್ಟ್ರೇಶನ್ಸ್‌ನಂತಹ ಪ್ರಶಸ್ತಿಗಳು ಸಂದಿರುವುದರಲ್ಲಿ ಯಾವುದೇ ಆಶ್ಚರ್ಯ ಇಲ್ಲ. ಅವರ ಸ್ಟೂಡಿಯೊ ಗುರುಗ್ರಾಮದಲ್ಲಿದೆ.

## KATHA

**ಕಥಾ ಒಂದು ಪ್ರಸಿದ್ಧಲಾಭರಹಿತ ಸಂಸ್ಥೆಯಾಗಿದ್ದು (www.katha.org), ಅಕ್ಷರಜ್ಞಾನದಿಂದಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ 1988ರಿಂದ ಕೆಲಸ ಮಾಡುತ್ತಿದೆ. ಸುಮಾರು 30 ವರ್ಷಗಳ ನಮ್ಮ ಅನುಭವವು ಬಡ ಮಕ್ಕಳ ಪುಸ್ತಕಮತ್ತು ಶಿಕ್ಷಣದ ಕ್ಷೇತ್ರದಲ್ಲಿದೆ.**

"ಭಾರತದ ಕಿರೀಟದಲ್ಲೊಂದು ಶಿಕ್ಷಣದ ಆಭರಣ." **– ನವೋಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕರು, ಐಎಂಎಫ್**

"ನಗರಗಳಲ್ಲಿನ ಸಾಮಾನ್ಯ ಮತ್ತು ಅನಿರೀಕ್ಷಿತ ದುಃಖಿಗಳೊಡನೆ ಸೆಣಸಾಡುವ ಜಗತ್ತಿನ ಎಲ್ಲ ಸೃಜನಶೀಲ ಯೋಜನೆಗಳಿಗೆ ಕಥಾ ಒಂದು ಉದಾಹರಣೆಯಾಗಿದೆ." **– ಚಾರ್ಲ್ಸ್ ಲ್ಯಾಂಡ್ರಿ, ದಿ ಆರ್ಟ್ ಆಫ್ ಸಿಟಿ ಮೇಕಿಂಗ್**

"ಕಥಾ ಮಕ್ಕಳ ಕುರಿತು ನಿಜವಾದ ಕಾಳಜಿ ಇಟ್ಟುಕೊಂಡಿದೆ. ಅದಕ್ಕಾಗಿಯೇ ಅದು... ಮಕ್ಕಳಿಗಾಗಿ ಅಷ್ಟೊಂದು ಸುಂದರವಾದ ಚಿತ್ರದ ಪುಸ್ತಕಗಳನ್ನು ರೂಪಿಸುತ್ತದೆ." **– ಟೈಮ್ ಔಟ್**

"ಮಕ್ಕಳು[ತಮ್ಮ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಲ್ಲಿ ಮುಂದುವರೆಯುವಂತಹ ಮತ್ತು ನಿಜವಾದ ಬದಲಾವಣೆ ತರಬಹುದು ಎಂಬ ಭಾವನೆ ಕಥಾದ ಕೆಲಸಕ್ಕೆ ಚಾಲನೆ ನೀಡುತ್ತದೆ." **– ಪೇಪರ್ ಟೈಗರ್ಸ್**




ಈ ಆವೃತ್ತಿ ಮೊದಲ ಬಾರಿಗೆ 2021ರಲ್ಲಿ ಪ್ರಕಟವಾಯಿತು
ಕಾಪಿರೈಟ್ © ಕಥಾ, 1991, 2014, 2021
ಪಠ್ಯದ ಕಾಪಿರೈಟ್ © ಗೀತಾ ಧರ್ಮರಾಜನ್
ಚಿತ್ರಗಳ ಕಾಪಿರೈಟ್ © ಕಥಾ
ಎ3, ಸರ್ವೋದಯ ಎನ್‌ಕ್ಲೇವ್, ಶ್ರೀ ಅರವಿಂದೋ ಮಾರ್ಗ, ನವದೆಹಲಿ 110 017.
ದೂರವಾಣಿ: 91–11 4141 6600 . 4141 6610
ಇ–ಮೇಲ್: editors@katha.org, ವೆಬ್‌ಸೈಟ್: www.katha.org
ಐಎಸ್‌ಬಿಎನ್ 978–93–82454–65–6

**ನಮ್ಮ ಧ್ಯೇಯ:** ಪ್ರತಿಯೊಂದು ಮಗುವೂ ಚೆನ್ನಾಗಿ ಓದಬೇಕು, ಖುಷಿಗಾಗಿ ಓದಬೇಕು!

ಕಥಾ ಎಂಬುದು 1988ರಲ್ಲಿ ಪ್ರಾರಂಭವಾದ ಒಂದು ನೋಂದಾಯಿತ, ಲಾಭರಹಿತ ಸಂಸ್ಥೆ. ನಾವು ಅಕ್ಷರಜ್ಞಾನದಿಂದ ಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತೇವೆ. ಮಕ್ಕಳು ಮತ್ತು ವಯಸ್ಕರಲ್ಲಿ ಓದುವ ಸಂತೋಷವನ್ನು ಹೆಚ್ಚಿಸುವ ಉದ್ದೇಶ ಇಟ್ಟುಕೊಂಡಿರುವ ನಾವು, ಗುಣಮಟ್ಟದ ಪುಸ್ತಕಗಳು ಮತ್ತು ಸಹಾಯದ ಮೂಲಕ 1,00,000ಕ್ಕೂ ಹೆಚ್ಚು ಬಡ ಮಕ್ಕಳನ್ನು ಗ್ರೇಡ್ ಮಟ್ಟದ ಓದುವಿಕೆಗೆ ಕರೆತರಲು ಅವರೊಂದಿಗೆ ಕೆಲಸ ಮಾಡುತ್ತೇವೆ.

**ಎಲ್ಲ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರುಬಳಕೆ ಮಾಡುವಂತಿಲ್ಲ ಅಥವಾ ಬಳಸಿಕೊಳ್ಳುವಂತಿಲ್ಲ.**
**ಈ ಪುಸ್ತಕಗಳ ಮಾರಾಟದಿಂದ ಬರುವ ಒಟ್ಟು ಆದಾಯದ 10% ಮೊತ್ತವು, ಸವಲತ್ತುಗಳಿಲ್ಲದ ಮಕ್ಕಳ ಓದುವಿಕೆ ಮತ್ತು ಜೀವನ ಪರ್ಯಂತದ ಕಲಿಕೆಯ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.**




ಐ ಲವ್ ರೀಡಿಂಗ್ ಲೈಬ್ರರಿ ಒಂದು ಅನನ್ಯ ಪುಸ್ತಕಗಳ ಸರಣಿಯಾಗಿದ್ದು, ಅದು ಹೊಸ ಮತ್ತು ಸಂಕೋಚ ಸ್ವಭಾವದ ಓದುಗರನ್ನು ಸುಲಭವಾಗಿ ಓದುವಂತೆ ಮಾಡುತ್ತದೆ. ಓದಿನ ವಿಭಿನ್ನ ಹಂತದಲ್ಲಿರುವ ಮಕ್ಕಳ ಕಲಿಕೆಯ ಅಗತ್ಯಗಳಿಗೆ ಸರಿಹೊಂದುವಂತೆ ಉತ್ತಮ ಗುಣಮಟ್ಟದ ವಿಷಯ ಮತ್ತು ವಿನ್ಯಾಸದೊಂದಿಗೆ, ಇದು ಭಾರತ ಮತ್ತು ಪ್ರಪಂಚದ ಅತ್ಯುತ್ತಮ ಸಾಹಿತ್ಯಕ ರಚನೆಗಳು ಮತ್ತು ಕಲಾಕೃತಿಗಳನ್ನು ಒಟ್ಟಿಗೆ ತರುತ್ತದೆ. ನಮ್ಮ ಪುಸ್ತಕಗಳು ಗೀತಾ ಧರ್ಮರಾಜನ್‌ರ ಅನನ್ಯ ಶಿಕ್ಷಣ ಮಾದರಿಯಾದ "ಸ್ಟೋರಿಪೆಡಗಾಜಿ™" ಯ ಸ್ವರೂಪ ಪಡೆದಿವೆ, ಈ ಮಾದರಿಯುವಿಶೇಷವಾಗಿ ಮೊದಲ ತಲೆಮಾರಿನ ಓದುಗರಲ್ಲಿ ಓದಿನ ಸಂತೋಷವನ್ನು ಉತ್ತೇಜಿಸುತ್ತದೆ ಹಾಗೂ ಮಗುವನ್ನು ಬಿಗ್ ಐಡಿಯಾಸ್ ಮತ್ತು **TA-DAA!** (ಥಿಂಕ್, ಆಸ್ಕ್, ಡಿಸ್ಕಸ್, ಆಕ್ಟ್ ಹಾಗೂ ಅಚೀವ್) ಆಕರ್ಷಕ ಜಗತ್ತಿಗೆ ಕರೆದೊಯ್ಯುತ್ತದೆ!

ಕಥಾದ ಹೋಲಿಸ್ಟಿಕ್ ಅರ್ಲಿ ಲರ್ನಿಂಗ್ (**KHEL!**) ಲ್ಯಾಬ್ ಸರ್ಕಾರಿ, ಲಾಭೋದ್ದೇಶವಿಲ್ಲದ ಮತ್ತು ಖಾಸಗಿ ಶಾಲೆಗಳಲ್ಲಿನ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ನಡೆಸುತ್ತದೆ. ಆನ್‌ಲೈನ್ ಸೆಶನ್‌ಗಳಿಂದ ಬೆಂಬಲಿತವಾದ ಈ **F2F** (ಫೇಸ್–ಟು–ಫೇಸ್) ಕಾರ್ಯಾಗಾರಗಳು ಶಿಕ್ಷಕರು, ಶಾಲಾ ಆಡಳಿತಾಧಿಕಾರಿಗಳು ಹಾಗೂ ಸ್ವಯಂಸೇವಕರಿಗೆ "ರೀಡಿಂಗ್ ಟೀಚರ್ಸ್ ಪ್ರಮಾಣಪತ್ರ"ವನ್ನು ದೊರಕಿಸಿಕೊಡುತ್ತವೆ. ಇನ್ನಷ್ಟು ತಿಳಿದುಕೊಳ್ಳಲು, **300m@katha.org** ಸಂಪರ್ಕಿಸಿ

ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು
ಗ್ರೀನ್ ಸೀರೀಸ್‌ನಲ್ಲಿ
ಸಂತೋಷ ಮತ್ತು ಅರ್ಥಕ್ಕಾಗಿ ಓದಿ





































FOR OUR BOOKS

www.books.katha.org

"[ಕಥಾ] ... ಭಾರತೀಯ ಪ್ರಕಾಶನ ಇತಿಹಾಸದಲ್ಲಿ ಒಂದು ಅಸಾಮಾನ್ಯ ಮತ್ತು ಅಪೂರ್ವವಾದ ಕ್ಷಣ."

– ಅಪ್ರತಿಮ
ದಿ ಎಕನಾಮಿಕ್ ಟೈಮ್ಸ್

ಮಕ್ಕಳಿಗಾಗಿ
ಒಂದು ಕಥಾ ಪುಸ್ತಕ
ISBN 978-93-88284-81-3
9 789388 284813
www.katha.org
₹ XXX